# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-2210/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 10/05/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಸತೀಶ್ ನಾಯ್ಕ, ಕಲ್ಮಾಡಿ, ಮಲ್ಪೆ ಅಂಚೆ, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಸತೀಶ್ ನಾಯ್ಕ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ತಾನು ಮಾಹಿತಿ ಹಕ್ಕು ಅಧಿನಿಯಮದಡಿ ಉಡುಪಿ ತಾಲ್ಲೂಕು, ಉಡುಪಿ ಗ್ರಾಮದ ಸರ್ವೆ ನಂಬರ್ 211/2010ರ 28 ಸೆಂಟ್ಸ್ ಜಾಗಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯಲ್ಲಿ 10ನೇ ಕಾಲಂನಲ್ಲಿ ವಾರಿಸು ಹಕ್ಕು ಮೇರೆಗೆ ಎಂದು ಎಮ್ಆರ್/566/01-02 ಕ್ರಯ ಮೂಲಿ ಹಕ್ಕು-ಖಾತೆ ಸಂಖ್ಯೆ:1720 ಎಂದು ನಮೂದಿಸಿದ್ದು, ಈ ಸಂಬಂಧ ಕಡತದ ಪ್ರತಿಯನ್ನು ಕೇಳಲಾಗಿ ಉಡುಪಿ ತಹಶೀಲ್ದಾರ್‌ರವರು ಕಡತವು ಅಲಭ್ಯವಾಗಿದೆ ಎಂದು ಪತ್ರದ ಮುಖೇನ ದೂರುದಾರರಿಗೆ ತಿಳಿಸಿರುತ್ತಾರೆ. ಈ ಬಗ್ಗೆ ದೂರುದಾರರು ತಹಶೀಲ್ದಾರ್‌ರವರಿಗೆ ಪತ್ರ ಬರೆದು, ತನಿಖೆ ನಡೆಸಿ ಸಂಬಂಧಿಸಿದ ಸಿಬ್ಬಂದಿ ಮೇಲೆ ಕ್ರಮ ಕೈಗೊಳ್ಳಬೇಕೆಂದು ದೂರು ನೀಡಿದ್ದರೂ ಸಹ, ಎದುರುದಾರರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಅವರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರಿಗೆ ಅವಕಾಶ ನೀಡಿದಾಗ್ಯೂ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

3. ದೂರಿನಂಶಗಳನ್ನು ಹಾಗೂ ದೂರುದಾರರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ದೂರುದಾರರಿಗೆ ದಿ:03/02/2014 ರಂದು ಉಡುಪಿ ತಹಶೀಲ್ದಾರ್ ಇವರ ಪರವಾಗಿ ದೂರುದಾರರಿಗೆ ಹಿಂಬರಹವನ್ನು ನೀಡಲಾಗಿದ್ದು, ಅದರಲ್ಲಿ ಮಾಹಿತಿ ಹಕ್ಕು ಅಧಿನಿಯಮದಡಿ ದೂರುದಾರರು ಅರ್ಜಿ ಸಲ್ಲಿಸಿ, ಕೊಡವೂರು ಗ್ರಾಮದ ಎಂಆರ್566/01-02ರ ಕಡತದ ನಕಲನ್ನು ಕೋರಿದ್ದು, ಈ ಬಗ್ಗೆ ಅಭಿಲೇಖಾಲಯದಲ್ಲಿ ಪರಿಶೀಲಿಸಲು ಸದರಿ ಎಂಆರ್566/01-02ರ ಕಡತ

ಅಭಿಲೇಖಾಲಯದಲ್ಲಿ ಇರುವುದು ಕಂಡು ಬರುವುದಿಲ್ಲವೆಂದು ತಿಳಿಸಿರುವುದು ಕಂಡು ಬರುತ್ತದೆ. ಈ ಪತ್ರಕ್ಕೆ ಪೂರಕವಾಗಿ ದೂರುದಾರರು ದಿ:11/02/2014ರಂದು ಉಡುಪಿ ತಹಶೀಲ್ದಾರ್‌ರವರಿಗೆ ಪತ್ರ ಬರೆದು, ತಾವು ಮೇಲೆ ಹೇಳಿದಂತಹ ಕಡತದ ಮಾಹಿತಿಯನ್ನು ಕೋರಿದ ಸಂದರ್ಭದಲ್ಲಿ ತಹಶೀಲ್ದಾರ್‌ರವರು ತಮ್ಮ ಕಛೇರಿಯ ಅಭಿಲೇಖಾಲಯದಲ್ಲಿ ಸದರಿ ಕಡತ ಇರುವುದು ಕಂಡು ಬಂದಿರುವುದಿಲ್ಲವೆಂದು ತಿಳಿಸಿದ್ದು, ಇದರಿಂದ ಸದರಿ ಕಡತ ಕಳೆದುಹೋಗಿದೆ ಎಂದು ಕಂಡು ಬರುತ್ತದೆ ಎಂದು ಆದ್ದರಿಂದ, ಸದರಿ ಕಳೆದು ಹೋಗಿರುವ ಕಡತದ ಬಗ್ಗೆ ಪೊಲೀಸರಿಗೆ ದೂರು ನೀಡಬೇಕೆಂದು ಹಾಗೂ ಈ ಬಗ್ಗೆ ಆಂತರಿಕ ವಿಚಾರಣೆ ಕೈಗೊಂಡು ಸಂಬಂಧಪಟ್ಟವರಿಗೆ ಶಿಕ್ಷೆ ವಿಧಿಸಬೇಕೆಂದು ಕೋರಿರುವುದು ಕಂಡು ಬರುತ್ತದೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಈ ಪತ್ರಕ್ಕೆ ಉತ್ತರವಾಗಿ ತಹಶೀಲ್ದಾರ್‌ರವರು ದೂರುದಾರರಿಗೆ ದಿ:27/06/2014ರ ಪತ್ರ ಬರೆದಿದ್ದು, ಅದರಲ್ಲಿ, ಮಾಹಿತಿ ಹಕ್ಕು ಅರ್ಜಿಯನ್ನು ಪರಿಶೀಲಿಸಲಾಗಿದೆ. ತಾವು ಮಾಹಿತಿ ಹಕ್ಕು ಅರ್ಜಿ ಅಡಿಯಲ್ಲಿ ಎಂಆರ್‌ನಂಬರ್566/01–02ರ ಕಡತ ಕಛೇರಿಯಲ್ಲಿ ಅಲಭ್ಯವಾದ ಬಗ್ಗೆ ಸಂಬಂಧಪಟ್ಟ ಸಿಬ್ಬಂದಿ ಮೇಲೆ ಶಿಸ್ತಿನ ಕ್ರಮ ಜರುಗಿಸಲು ಕೋರಿರುತ್ತೀರಿ ಮತ್ತು ಮತ್ತೊಮ್ಮೆ ಮಾಹಿತಿ ಹಕ್ಕು ಅಧಿನಿಯಮದಡಿ ಇದೇ ವಿಚಾರಕ್ಕೆ ಅರ್ಜಿ ಸಲ್ಲಿಸಿರುತ್ತೀರಿ. ಆದರೆ, ಸದರಿ ಎಂಆರ್‌ನಂಬರ್566/01–02 ನೇ ಸಾಲಿಗೆ ಸೇರಿದ ದಾಖಲೆಯಾಗಿದ್ದು, ಅದನ್ನು ಶಾಶ್ವತ ಕಡತಗಳನ್ನು ಬಿಟ್ಟು, ಉಳಿದವುಗಳನ್ನು ಅಭಿಲೇಖಾಲಯದ ಸ್ಥಳಾವಕಾಶ ನೋಡಿ ನಿಗಧಿತ ಸಮಯದಲ್ಲಿ ಹಳೇ ಕಡತಗಳನ್ನು ವಿಲೇವಾರಿ ಮಾಡಲಾಗುತ್ತಿರುವುದರಿಂದ, ಅಭಿಲೇಖಾಲಯ ಶಾಖೆಯ ಸಿಬ್ಬಂದಿ ಮೇಲೆ ಕ್ರಮ ಜರುಗಿಸಲು ಬರುವುದಿಲ್ಲವೆಂದು ತಿಳಿಸಿರುವುದು ಕಂಡು ಬರುತ್ತದೆ. (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಈ ಅಂಶಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ಕೋರಿರುವ ಎಂಆರ್‌ನಂಬರ್566/01–02ಕ್ಕೆ ಸಂಬಂಧಿಸಿದ ಕಡತವು ಉಡುಪಿ ತಹಶೀಲ್ದಾರ್‌ರವರ ಕಛೇರಿಯ ಅಭಿಲೇಖಾಲಯದಲ್ಲಿ ಲಭ್ಯವಿಲ್ಲವೆಂದು ಕಂಡು ಬರುತ್ತದೆ. ಆದರೆ, ಸದರಿ ಕಡತವು 10 ವರ್ಷಕ್ಕಿಂತ ಮೇಲ್ಪಟ್ಟ ಕಡತವಾಗಿದ್ದು, ಅದನ್ನು ವಿಲೇ ಮಾಡಲಾಗಿದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಎದುರುದಾರರುಗಳು ಹಾಜರುಪಡಿಸಿರುವುದಿಲ್ಲ. ಹಾಗೆಯೇ ಸದರಿ ದಾಖಲೆಯು 10 ವರ್ಷದ ನಂತರ ವಿಲೇಮಾಡುವಂತಹ ದಾಖಲೆಯಾಗಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಇದಲ್ಲದೇ, ಸದರಿ ಎದುರುದಾರರು ತಮ್ಮ ಆಕ್ಷೇಪಣೆಯನ್ನೇ ಸಲ್ಲಿಸಿರುವುದಿಲ್ಲ.

4. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ತಾಲ್ಲೂಕು, ಉಡುಪಿ ಹೋಬಳಿ, ಉಡುಪಿ ಗ್ರಾಮ/ಕೊಡವೂರು ಗ್ರಾಮದ ಸರ್ವೇ ನಂಬರ್ 211/2010ರ 28 ಸೆಂಟ್ಸ್ ಜಾಗಕ್ಕೆ**

ಸಂಬಂಧಿಸಿದ ಎಮ್‌ಆರ್ ನಂಬರ್566/01–02ರ ಲಭ್ಯವಿಲ್ಲವೆಂದು ವರದಿ ಮಾಡಿರುವ ಸದರಿ ಕಡತವನ್ನು ಪುನರ್ ರಚಿಸಲು ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

10/5/17

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು. 10/5/17